ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 45/2019 .

ಪ್ರಾ.ಸಾ. : 6
ಚಾ.ಸಾ. : 4

| | | |
|---|---|---|
| ಹೆಸರು | : | ಸುಬ್ಬಯ್ಯ |
| ತಂದೆಯ ಹೆಸರು | : | ವಿಶ್ವನಾಥ್ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಕೃಷಿ |
| ವಿಳಾಸ | : | ಬಿರುನಾಣಿ |

... ............................................................................................................ ...

ದಿನಾಂಕ 16 ನೇ ಮಾರ್ಚ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ :-

ಚಾಸಾ 1, 2 ಪರಿಚಯ. ಆರೋತರು ಪರಿಚಯ. ಅವರೆಲ್ಲರೂ ನಮ್ಮ ಊರಿನವರು.

ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ, ಸಾಕ್ಷಿಯು ಗುರುತಿಸಿರುವ ದಾಖಲೆಯು ಸ್ಥಳ ಪಂಚನಾಮೆ ಹಾಗೂ ಸ್ವತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿ ಪಿ 2 ಎಂದು ಈಗಾಗಲೇ ಗುರುತಿಸಿದ್ದು ಸಾಕ್ಷಿಯ ಸಹಿ ನಿ ಪಿ 2 ಡಿ ಎಂದು ಗುರುತಿಸಲಾಯಿತು. ಚಾಸಾ 1 ರವರ ಕಣದಲ್ಲಿ ಪೊಲೀಸರು ಗಲಾಟೆ ವಿಚಾರವಾಗಿ ಮಹಜರ್ ಮಾಡಿದರು ಆಗ ನಿ ಪಿ 2 ಕ್ಕೆ ಸಹಿ ಮಾಡಿದ್ದೇನೆ. ದಿ. 07.02.2018 ರಂದು ಸಹಿ ಮಾಡಿರುತ್ತೇನೆ. ದೊಣ್ಣೆಯನ್ನು ಅಮಾನತುಪಡಿಸಿದರು. ಮು. ಮಾಲನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು :- ಆರೋಪಿ 1 ರವರಿಂದ ಃ-

ನಾನು ಹಾಗೂ ಆರೋಪಿ 1 ಆದ ನೀವು ಒಂದೇ ಕುಟುಂಬದವರು ಎನ್ನುತ್ತಾರೆ. ಆರೋಪಿ 1 ಆದ ನೀವು ನನಗಾಗಲೀ ನಮ್ಮ ಕುಟುಂಬದವರಿಗಾಗಲೀ ಯಾವುದೇ ತೊಂದರೆ ನೀಡಿಲ್ಲ ಎನ್ನುತ್ತಾರೆ. ಚಾಸಾ 1 ರವರು ಮೀನುಗಾರರು ಎಂದು ಹೇಳಿಕೆ ನೀಡಿದ್ದಾರೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಚಾಸಾ 1 ರವರಿಗೆ ಗೋಣಿಕೊಪ್ಪದಲ್ಲಿ B.C. timber mill ಇದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಹೇಳಿಕೆಯಲ್ಲಿ ಆರೋಪಿ 1 ಆದ ನಾನು ಬಿರುನಾಣಿ ಗ್ರಾಮದ ಹಲವರ ವಿರುದ್ಧ ದೂರುಗಳನ್ನು ನೀಡುತ್ತೇನೆ ಹಾಗೂ ಗಲಾಟೆ ಮಾಡುತ್ತೇನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ದಿ. 13.04.2018 ರಂದು ನಾನು ಹೇಳಿಕೆಯಲ್ಲಿ ಮರಳು ವಿಚಾರದಲ್ಲಿ ಗಲಾಟೆ ಆಗಿದೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನನಗೆ ಸರಿಯಾಗಿ ಗೊತ್ತಿಲ್ಲ ಎನ್ನುತ್ತಾರೆ. ಚಾಸಾ 1 ರವರ ವಿರುದ್ಧ ಚರಣ್‌ಕುಮಾರ್ ರವರ ವಿರುದ್ಧ ಆರೋಪಿ 1 ಆದ ನಾನು ಅಬಕಾರಿ ಇಲಾಖೆಗೆ ದೂರು ನೀಡಿದ್ದೇನೆ, ಅಬಕಾರಿ ಇಲಾಖೆಯವರೇ ಬಂದು ಚಾಸಾ 1 ರವರ ಮನೆ ಶೋಧನೆ ಮಾಡಿದರು ಎಂದು ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನನಗೆ ಆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ.

ಚಾಸಾ 1 ರವರ ಜೊತೆ ಸೇರಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಪೊಲೀಸರು ಕರೆದರು ರಾಜೇಂದ್ರ ಕರೆದಿಲ್ಲ ಎನ್ನುತ್ತಾರೆ. ನಾನು ಹೇಳಿದಂತೆ ಅಲ್ಲಿ ಕಾಫಿ ಕಣ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಕಾಫಿ ತೋಟ ಅರ್ಧ ಎಕರೆ ಮಾತ್ರ ಇದೆ , ಒಂದು ಎಕರೆ 45 ಸೆಂಟ್ ನಲ್ಲಿ ಕಾಫಿ ತೋಟ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಕಾಫಿ ಕಣ ಎಂದು ಹೇಳುವ ಸ್ಥಳ ನನ್ನ ಕುಟುಂಬದ ಸ್ಥಳ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿಯವರು 20 ವರ್ಷದ ಹಿಂದೆ Pumping station ಮಾಡಲು ಅದನ್ನು ಬಳಸಿಕೊಂಡಿದ್ದಾರೆ ಎಂದರೆ 2 ಸೆಂಟ್ ಜಾಗದಲ್ಲಿ ಮಾಡಿದ್ದಾರೆ ಎನ್ನುತ್ತಾರೆ. ಪಂಚಾಯಿತಿಯವರು 20 ವರ್ಷಗಳ ಹಿಂದೆ ಚಾಸಾ 1 ರವರ ಬಳಿ ಕೇಳಿದ್ದರು ಎನ್ನುತ್ತಾರೆ. ಚಾಸಾ 1 ರವರಿಗೆ ವಯಸ್ಸು ಎಷ್ಟು ಎಂದು ನನಗೆ ಗೊತ್ತಿಲ್ಲ. ಆ ರೀತಿ ಪಂಚಾಯಿತಿಯವರು ಕೇಳಿದ ಬಗ್ಗೆ ನನ್ನ ಬಳಿ ದಾಖಲಾತಿ ಇಲ್ಲ ಎನ್ನುತ್ತಾರೆ.

ರಾಜೇಂದ್ರರವರು ಆರೋಪಿ 1 ಆದ ನನ್ನ ಕಾಫಿ ಕಣದಲ್ಲಿ ಕಾಫಿ ತುಂಬುತ್ತಿದ್ದಾಗ ಹಲ್ಲೆ ಮಾಡಿದಾಗ ದಿ. 04.07.2018 ರಂದು ನಾನು ಹಾಜರಿದ್ದೆ ಎಂದರೆ ಸರಿಯಲ್ಲ. ಸಂಜೆ 3 ರಿಂದ 6.00 ರ ತನಕ ನಾನು ಹಾಜರಿದ್ದೆ, ಮೊಬೈಲ್‌ನಲ್ಲಿ ಮಾತನಾಡುತ್ತಿದ್ದೆ ಎಂದರೆ ಸರಿಯಲ್ಲ. ಆಗ ರಾಜೇಂದ್ರ ಆರೋಪಿ 1 ಆದ ನನಗೆ ಹೊಡೆಯಲು ಬಂದರೆ ಎಂದರೆ ಸರಿಯಲ್ಲ. ಆಗ ಮನು ಮತ್ತು ಬಿದ್ದಪ್ಪ ಸಹ ಹಾಜರಿದ್ದರು ಎಂದರೆ ಸರಿಯಲ್ಲ. ರಾಜೇಂದ್ರ ಹಲ್ಲೆ ಮಾಡಲು ಬಂದಾಗ ನಾನು ಮತ್ತು ನಿಖಿಲ್ ಬಂದು ತಡೆದೆವು ಎಂದರೆ ಸರಿಯಲ್ಲ. ಚಾಸಾ 1 ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೊಬೈಲ್ ಸಂಖ್ಯೆ 9449403396, ಸದರಿ ಮೊಬೈಲ್ ನನ್ನ ಬಳಿ 10 ವರ್ಷದಿಂದ ಇದೆ.

**<u>ಪಾಟೀ ಸವಾಲು</u> :- ಆರೋಪಿ 2 ರವರ ಪರ ವಕೀಲರಿಂದ ಃ-**

ಮಹಜರ್ ಅನ್ನು ನಾನು ಓದಿರುವುದಿಲ್ಲ. ರಾಜೇಂದ್ರ ನಮ್ಮ ಪಕ್ಕದ ಮನೆಯವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ದೊಣ್ಣೆಯನ್ನು ಅಮಾನತುಪಡಿಸಿಲ್ಲ ಎಂದರೆ ಸರಿಯಲ್ಲ. ಮು. ಮಾಲಿನ ಮೇಲೆ ಯಾವುದೇ ಸಹಿ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u> :- - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)

**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

Sd/xxx-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)